ಮೇಲಿನ ಮಮತೆಯಿಂದಲ್ಲ. ಅವಳಿಲ್ಲದ್ದರಿಂದ ಉಂಟಾದ ಏಕಾಂಗಿತನದಿಂದ. ತಾನು ದ್ವೇಷಿಸುತ್ತಿದ್ದ ಮಹಿಳೆ ತನ್ನ ಬದುಕಿನ ಭಾಗವಾಗಿದ್ದಾಳೆಂಬ ಭಾವನೆ ಈ ಮೊದಲೆಂದೂ ಆತನ ಅರಿವಿಗೆ ಬಂದಿರಲಿಲ್ಲ.

ಆತನಿಗೆ ಎಚ್ಚರವಾದಾಗ ಅದಾಗಲೇ ಮಧ್ಯಾಹ್ನ ಸಮೀಪಿಸುತ್ತಿತ್ತು. ತನ್ನ ಹೆಂಡತಿಯನ್ನು ಶಪಿಸುತ್ತಲೇ ಆತ ಆ ದಿನವನ್ನು ಆರಂಭಿಸಿದ. ಏಕೆಂದರೆ ಪ್ರತಿ ಮುಂಜಾನೆ ಆಕೆ ಆತನನ್ನು ಬೇಗ ಎಬ್ಬಿಸುತ್ತಿದ್ದಳು. ಆದರೆ ಅಂದೇನೂ ಆತನಿಗೆ ಅಂಥ ಅವಸರವಿರಲಿಲ್ಲ. ಆಲಸ್ಯದಿಂದಲೇ ಎದ್ದು, ಪ್ರಾತರ್ವಿಧಿಗಳನ್ನು ಮುಗಿಸಿ, ತನ್ನ ಬೆಳಗಿನ ಉಪಹಾರಕ್ಕಾಗಿ ಆಡುಗಳನ್ನು ಹಿಂಡಿಕೊಂಡ. ನಿನ್ನೆ



ಉಳಿದಿದ್ದ ಚಪಾತಿಗಳನ್ನು ತಾಜಾ ಹಾಲಿನಲ್ಲಿ ನೆನೆಸಿ ತಿನ್ನುವುದೇ ಅಂದಿನ ಉಪಹಾರವಾಗಿತ್ತು. ನಂತರ ತನ್ನ ಪ್ರೀತಿಯ ಹುಕ್ಕಾ ಬದಿಗಿರಿಸಿಕೊಂಡು, ಸೇದಲು ಕುಳಿತ. ತೆರೆದ ಕಿಟಕಿಯಿಂದ ತೂರಿ ಬರುತ್ತಿದ್ದ ಸೂರ್ಯನ ಕಿರಣಗಳಿಂದಾಗಿ ಈಗ ಗುಡಿಸಲು ಬೆಚ್ಚಗಿತ್ತು. ಆ ಬೆಳಕಿನ ಕಿರಣಗಳು, ಆ ಗುಡಿಸಲಿನ ಮೂಲೆಯಲ್ಲಿ ಹೆಣೆದುಕೊಂಡಿದ್ದ ಜೇಡರಬಲೆಯನ್ನು ತೆರೆದು ತೋರಿದವು. ಆ ದಿನ ಹೊಲದ ಕೆಲಸಕ್ಕೆ ಹೋಗಬಾರದೆಂದು ಅವನು ಅದಾಗಲೇ ತಿರ್ಮಾನಿಸಿದ್ದ. ಅಲ್ಲೇ ಇದ್ದುಕೊಂಡು ತನ್ನ ಗುಡಿಸಲನ್ನು ಸ್ವಚ್ಛಗೊಳಿಸಬೇಕೆಂಬ ಆಲೋಚನೆ ಮಾಡಿದ್ದ. ಒಂದು ಉದ್ದ ಕೋಲಿನ ತುದಿಗೆ ಉಣ್ಣೆಯ ಗುಂಜನ್ನು ಕಟ್ಟಿ, ಇನ್ನೇನು ಜೇಡರ ಬಲೆ ತೆಗೆದು ಹಾಕಬೇಕೆನ್ನುವಷ್ಟರಲ್ಲಿ, ಗುಡಿಸಲಿನ ಚಪ್ಪರದೊಳಗೆ ಗುಬ್ಬಿಯ ಗೂಡೊಂದು ಇದ್ದದ್ದು ಆತನಿಗೆ ಕಾಣಿಸಿತು. ಅಲ್ಲಿ ಎರಡು ಗುಬ್ಬಿಗಳು ಪಟ ಪಟ ರೆಕ್ಕೆ ಬಡಿಯುತ್ತ, ಗೂಡಿನ ಒಳಗೊಮ್ಮೆ ಹೊರಗೊಮ್ಮೆ ಹಾರಾಡುತ್ತ ಒಂದೇ ಸಮನೆ ಚಿಲಿಪಿಲಿಗೈಯುತ್ತಿದ್ದವು.

ಕೋಲಿನ ತುದಿಯಿಂದ ತಿವಿದು ಆ ಗೂಡನ್ನು ಕೆಡವಿ ಬಿಡಬೇಕೆಂಬುದು ಆತನ ಆ ಕ್ಷಣದ ನಿರ್ಧಾರವಾಗಿತ್ತು. ಆದರೆ ಆತನ ಜೀವದೊಳಗೇನೋ ಮಿಡುಕಿದಂತಾಗಿ, ಗಲಿಬಿಲಿಗೊಂಡು ಕೈಯಲ್ಲಿದ್ದ ಕೋಲನ್ನು ಕೆಳಗೆಸೆದ. ನಂತರ ಒಂದು ಅಟ್ಟಣಿಕೆ ಮೇಲೇರಿ ನಿಂತು, ಆ ಗುಬ್ಬಿಗಳ ಗೂಡಿನ ಒಳಗೆಲ್ಲ ಕಣ್ಣಾಡಿಸಿದ. ರೆಕ್ಕೆಗಳಿಲ್ಲದ ಬರೀ ಕೆಂಪು ಮಾಂಸದ ಮುದ್ದೆಯಂತಿರುವ, ನಿನ್ನೆಯಷ್ಟೆ ಜನಿಸಿರಬಹುದಾದ ಎರಡು ಪುಟ್ಟ ಮರಿಗಳು ಒಳಗೆ ಮಲಗಿದ್ದವು. ಆ ಮರಿಗಳ